ಇ) ರಾಜ್ಯ, ರಾಷ್ಟ್ರ ಹಾಗೂ ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿದ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರತ್ಯೇಕವಾಗಿ ಕೃಪಾಂಕಗಳನ್ನು ನೀಡಿದಲ್ಲಿ ಶಿಕ್ಷಣದ ಗುಣಮಟ್ಟದಲ್ಲಿ ತೀವ್ರವಾಗಿ ಕ್ಷೀಣತೆ ಉಂಟಾಗುತ್ತದೆ ಎಂದು ನಿರಾಕರಣಾತ್ಮಕ ನಿಲುವನ್ನು ತೆಗೆದುಕೊಂಡಿರುವುದರಿಂದ ಕ್ರೀಡಾಪಟುಗಳಿಗೆ ಕೃಪಾಂಕ ನೀಡುವುದನ್ನು ಪರಿಗಣಿಸಲು ಬರುವುದಿಲ್ಲ.

ಕ್ರೀಡಾ ಸ್ಪರ್ಧೆಗಳು ರಾಜ್ಯಮಟ್ಟದಲ್ಲಿ ನಡೆಯುವಾಗ ಕ್ರೀಡಾಪಟುಗಳಿಗೆ ಉಚಿತ ವಸತಿ ಹಾಗೂ ಆಹಾರ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಈ) ಆಂಧ್ರ ಸರ್ಕಾರದ ಮಾದರಿಯಲ್ಲಿ ಅಧ್ಯಯನ ಮಾಡುವ ರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ನೇಮಕಾತಿ ಹಾಗೂ ಸೀಟು ನೀಡುವ ಅವಕಾಶವಿರುವುದಿಲ್ಲ.

*ಮಂಗಳೂರು ವಿಧಾನ ಸಭಾಕ್ಷೇತ್ರದಲ್ಲಿ ಪಿಡಬ್ಲ್ಯೂಡಿ ರಸ್ತೆಗಳ ದುರಸ್ತಿ.*

2300(3283) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಮಂಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಪಿಡಬ್ಲ್ಯೂಡಿ ರಸ್ತೆಗಳ ದುರಸ್ತಿಗೆ, ಕಾಂಕ್ರಿಟಿಕರಣಕ್ಕೆ, ರಾಜ್ಯ ಹೆದ್ದಾರಿಗಳ ದುರಸ್ತಿಗೆ ವಸತಿ ಗೃಹಗಳ ದುರಸ್ತಿಗೆ, ಕೋರ್ಟು ಕಛೇರಿಗಳ ದುರಸ್ತಿಗಾಗಿ ಎಷ್ಟು ಅಂದಾಜು ವೆಚ್ಚ ಮಾಡಬೇಕಾಗಿದೆ. ಈ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು 1999-2000, 2000-2001 ರಲ್ಲಿ ಮೇಲಿನ ವಿಷಯಗಳಿಗೆ ಎಷ್ಟು ಹಣ ಮಂಜೂರಾತಿಯಾಗಿದೆ ಎಷ್ಟು ಹಣ ಬಿಡುಗಡೆಯಾಗಿದೆ; ಎಷ್ಟು ಹಣ ಖರ್ಚು ಮಾಡಲಾಗಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

ಮಂಗಳೂರು ವಿಧಾನ ಸಭಾ ಕ್ಷೇತ್ರದಲ್ಲಿ ಪಿಡಬ್ಲ್ಯೂಡಿ ರಸ್ತೆಗಳ ದುರಸ್ತಿಗೆ 4.50 ಲಕ್ಷ ಕಾಂಕ್ರೀಟಿಕರಣಕ್ಕೆ 392.00ಲಕ್ಷಗಳು, ರಾಜ್ಯ ಹೆದ್ದಾರಿಗಳ ದುರಸ್ತಿಗೆ 21.10 ಲಕ್ಷಗಳಷ್ಟು ಬೇಕಾಗಬಹುದೆಂದು ಅಂದಾಜಿಸಲಾಗಿದೆ.

ವಸತಿ ಗೃಹಗಳ ದುರಸ್ತಿಗಾಗಿ ರೂ. 60 ಲಕ್ಷ ಮತ್ತು ಕೋರ್ಟುಕಛೇರಿಗಳ ದುರಸ್ತಿಗಾಗಿ ರೂ. 5.00 ಲಕ್ಷಗಳು ಬೇಕಾಗಬಹುದೆಂದು ಅಂದಾಜಿಸಲಾಗಿದೆ.

ರಸ್ತೆಗಳ ದುರಸ್ತಿಗಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

1999-2000,2000-2001 ರಲ್ಲಿ ಮೇಲಿನ ವಿಷಯಗಳಿಗೆ ರಸ್ತೆಗಳಿಗೆ ಸಂಬಂಧಿಸಿದಂತೆ ಹಣ ಮಂಜೂರಾತಿ ಬಗ್ಗೆ ಬಿಡುಗಡೆ ಹಾಗೂ ಖರ್ಚು ಮಾಡಲಾದ ಮೊತ್ತದ ವಿವರಗಳನ್ನು ಈ ಕೆಳಕಂಡಂತಿದೆ.

| ಕ್ರ. ಸಂ. | ವರ್ಷ | ಪಿಡಬ್ಲ್ಯೂಡಿ ರಸ್ತೆಗಳು | ಮಂಜೂರಾದ ಮೊತ್ತ | ಬಿಡುಗಡೆ ಮೊತ್ತ ಅನುದಾನ | ಖರ್ಚಾದ ಮೊತ್ತ |
|---|---|---|---|---|---|
| | | | ಲಕ್ಷ ರೂ.ಗಳಲ್ಲಿ | | |
| ೧. | ೧೯೯೯-೨೦೦೦ | ಜಿಲ್ಲಾ ಮುಖ್ಯರಸ್ತೆ | ೮.೫೨೫ | ೮.೫೨೫ | ೫.೧೫೫ |
| | | ರಾಜ್ಯ ಹೆದ್ದಾರಿ ರಸ್ತೆ | ೨.೦೦ | ೨.೦೦ | ೨.೦೦ |
| | | ಹಾಂಕ್ರೀಟೀಕರಣಕ್ಕಾಗಿ | ೧೪.೪೬ | ೧೪.೪೬ | ೧೪.೫೦ |
| | | ಒಟ್ಟು | ೨೪.೯೮೫ | ೨೪.೯೮೫ | ೨೧.೬೫೫ |
| ೨. | ೨೦೦೦-೨೦೦೧ | ಜಿಲ್ಲಾ ಮುಖ್ಯರಸ್ತೆ | ೦.೫೦ | ೦.೫೦ | ೦.೫೦ |
| | | ರಾಜ್ಯ ಹೆದ್ದಾರಿ ರಸ್ತೆ | ೧.೯೪ | ೧.೯೪ | -- |
| | | ಹಾಂಕ್ರೀಟೀಕರಣಕ್ಕಾಗಿ | ೧೧.೫೦ | ೧೧.೫೦ | -- |
| | | ಒಟ್ಟು | ೧೩.೯೪ | ೧೩.೯೪ | ೦.೫೦ |

೧೯೯೯-೨೦೦೦, ೨೦೦೦-೦೧ ರಲ್ಲಿ ವಸತಿ ಗೃಹ ದುರಸ್ತಿ ಹಾಗೂ ಕೋರ್ಟ್ ಕಛೇರಿಗಳ ದುರಸ್ತಿಗಾಗಿ ಹಣ ಮಂಜೂರಾತಿ ಬಗ್ಗೆ, ಹಣ ಬಿಡುಗಡೆ ಬಗ್ಗೆ ಹಾಗೂ ಖರ್ಚು ಮಾಡಲಾದ ಮೊತ್ತದ ವಿವರಗಳು.

ಲಕ್ಷ ರೂ.ಗಳಲ್ಲಿ

| ಕ್ರ. ಸಂ. | ವರ್ಷ | ವಸತಿ ಗೃಹ ಹಾಗೂ ಕೋರ್ಟ್ ಕಛೇರಿ | ಮಂಜೂರಾದ ಮೊತ್ತ | ಬಿಡುಗಡೆ ಮೊತ್ತ ಅನುದಾನ | ಖರ್ಚಾದ ಮೊತ್ತ |
|---|---|---|---|---|---|
| ೧. | ೧೯೯೯-೨೦೦೦ | ವಸತಿ ಗೃಹ ಹಾಗೂ | ೬.೮೭೨ | ೫.೨೪೫ | ೧,೭೭೫ |
| | | ಕೋರ್ಟ್ ಕಛೇರಿ | -- | -- | -- |
| | | ಒಟ್ಟು | ೬.೮೭೨ | ೫.೨೪೫ | ೧,೭೭೫ |
| ೨. | ೨೦೦೦-೨೦೦೧ | ವಸತಿ ಗೃಹ ಹಾಗೂ | ೧೫.೫೧ | ೧೫.೫೧ | ೩.೫೫೫ |
| | | ಕೋರ್ಟ್ ಕಛೇರಿ | ೭.೪೭೫ | ೭.೪೭೫ | -- |
| | | ಒಟ್ಟು | ೨೨.೯೮೫ | ೨೨.೯೮೫ | ೩..೨೫ |